ಶ್ರೀ ಎಂ.ಎಸ್. ಆತ್ಮಾನಂದ:- ಸನ್ಮಾನ್ಯ ಸಭಾಧ್ಯಕ್ಷರೆ ನಾನು ಈ ಗಮನ ಸೆಳೆಯುವ ಸೂಚನೆಯನ್ನು ಪ್ರಸ್ತಾಪ ಮಾಡುವುದಿಲ್ಲ. ವಿ.ಸಿ. ನಾಲಾ ಆಧುನೀಕರಣ ಕಾರ್ಯವನ್ನು ಶೀಘ್ರಗತಿಯಲ್ಲಿ ಮುಗಿಸಿಕೊಡಬೇಕೆಂದು ಸರ್ಕಾರವನ್ನು ಕೋರುತ್ತೇನೆ.

2) 40 ಕಿರು ಸಿಮೆಂಟ್ ಕಾರ್ಖಾನೆಗಳ ಮುಚ್ಚು ವಿಕೆಯಿಂದುಂಟಾದ ನಷ್ಟ.

ಶ್ರೀ ಟಿ.ಬಿ. ಜಯಚಂದ್ರ:- ರಾಜ್ಯದಲ್ಲಿ ಸುಮಾರು 100 ಕೋಟಿ ರೂಪಾಯಿ ಬಂಡವಾಳ ಹೂಡಿರುವ 40 ಕಿರುಸಿಮೆಂಟು ಕಾರ್ಖಾನೆಗಳ ಮುಚ್ಚುವಿಕೆಯಿಂದ ಒದಗಿರುವ ಪರಿಸ್ಥಿತಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಸದನದ ಮುಂದೆ ಮಂಡಿಸಲಿಚ್ಚಿಸುತ್ತೇನೆ.

1. In the early 1980s, in view of scarcity of cement, several entrepreneurs took up smaller projects for establishments of Mini Cement Plants of 30/60/100/200 TPD capacity, using Vertical Shaft Kiln (VSK) technology of the Cement Research Institute (CRI), New Delhi.

2. In all 47 such Mini cement plants of capacity ranging from 30 to 200 TPD were taken up for implementation during the last 10 years. Out of these, 37 units have already gone into production and 10 units are yet to go into production.

3. Units started in the early 1980s upto 1985-86 were benefitted by favourable market conditions, whereas units started subsequently could not compete in the market due to competition from major cement plants, whose capacity also expanded during this period.

ಶ್ರೀ ವಾಟಾಳ್ ನಾಗರಾಜ್:- ನಾವು ಈ ಸ್ಥಾನದಲ್ಲಿ ಕುಳಿತು ಹೇಳಿಕೆಗಳು ಕನ್ನಡದಲ್ಲಿ ಬರಬೇಕೆಂದು ನಿನ್ನೆ ಹೇಳಿದೆವು, ಮೊನ್ನೆ ಹೇಳಿದೆವು. ನಾನು ಒಬ್ಬನೇ ಏನೋ ಇದನ್ನು ಕೇಳುತ್ತೇನೆ ಎನ್ನುವ ಉದ್ದೇಶ ಎಂದು ಯಾರೂ ತಿಳಿದುಕೊಳ್ಳಬಾರದು. ನಾನು ತಮ್ಮ ಮೂಲಕ ಮನವಿ ಮಾಡುತ್ತಿದ್ದೇನೆ. ಕನ್ನಡದಲ್ಲಿ ಹೇಳಿಕೆಗಳನ್ನು ಕೊಡಿ ಎಂದು ಅನೇಕ ಸಚಿವರುಗಳಿಗೆ ಕೇಳುತ್ತಾ ಬಂದಿದ್ದೇನೆ. ಅಧಿಕಾರಿಗಳು ಇಂಗ್ಲೀಷಿನಲ್ಲಿ ಕಳುಹಿಸುತ್ತಾರೆ. ಇವರು ಅಧಿಕಾರಿಗಳಿಗೆ ಹೇಳಬೇಕು. ನಿನ್ನೆ ಹಾರ್ನಳ್ಳಿ ರಾಮಸ್ವಾಮಿಯವರು ಹೇಳಿಕೆ ಕೊಡುವಾಗ ಇದೇ ಸಂದರ್ಭ ಬಂದಾಗ ಅವರು ಒಂದು ಹೇಳಿಕೆಯನ್ನು ಇಂಗ್ಲೀಷಿನಲ್ಲಿ ಕೊಡುವುದನ್ನು ನಿಲ್ಲಿಸಿ ನಾಳೆ ಕನ್ನಡದಲ್ಲಿ ಕೊಡುತ್ತೇನೆಂದು ಹೇಳಿದರು. ಆದರೂ ಈಗ ಅದೇ ಮುಂದುವರೆಯುತ್ತಿದೆ. ಇದರಿಂದ ನನಗೆ ನೋವು ಆಗುತ್ತಿದೆ. ಇದು ಬರೀ ವಾಟಾಳ್ ನಾಗರಾಜ್ ಒಬ್ಬರೇ ಕೇಳುತ್ತಾರೆಂದು ಅಲ್ಲ. ಖರ್ಗೆಯವರ ಬಗ್ಗೆ ನನಗೆ ಅತ್ಯಂತ ಗೌರವ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ನಾಲ್ಕು ದಿವಸಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಸುತ್ತೋಲೆಗಳನ್ನು ಕನ್ನಡದಲ್ಲೇ ಕೊಡುತ್ತೇವೆ, ವಿಧಾನಸಭೆಯಲ್ಲಿ ಕನ್ನಡದಲ್ಲಿ ಆರಂಭ ಮಾಡುತ್ತೇವೆ ಎಂದೆಲ್ಲಾ ಹೇಳಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಸಾಮಾನ್ಯ ರೈತರ ಮಕ್ಕಳು ಆಯ್ಕೆಯಾಗಿ ಇಲ್ಲಿ ಬಂದಿದ್ದಾರೆ. ಒಂದು ರೀತಿ ಚಂಡಿ ಕಥೆ ಇಲ್ಲಿ ಆಗಿದೆ. ಕನ್ನಡ ಜಾರಿ ಆಗಬೇಕು, ಎಲ್ಲವೂ ಕನ್ನಡದಲ್ಲಿ ಬರಬೇಕೆಂದು ಒತ್ತಾಯ ಮಾಡಿದಮೇಲೆ, ಕಳೆದ 3 ದಿವಸಗಳಿಂದ ಪ್ರತಿಯೊಂದೂ

ಸ್ಟೇಟ್‌ಮೆಂಟ್‌ಗಳನ್ನು ಇಂಗ್ಲೀಷಿನಲ್ಲಿ ಮಾಡುತ್ತಿದ್ದಾರೆ. ಇವತ್ತು ಬಂದಿರತಕ್ಕ ಬಿಸಿನೆಸ್ ಲಿಸ್ಟ್ ಇಂಗ್ಲೀಷಿನಲ್ಲಿದೆ.

ಶ್ರೀ ವಾಟಾಳ್ ನಾಗರಾಜ್:- ಇದರ ಬಗ್ಗೆ ಕರ್ನಾಟಕ ಸರ್ಕಾರದ ನೀತಿ ಏನು?

ಅಧ್ಯಕ್ಷರು:- ಸ್ಪಷ್ಟವಾಗಿ ಇದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ನೆರೆಹಾವಳಿ ಬಗ್ಗೆ ಒಂದು ಪುಸ್ತಕ ಬಂದಿದೆ. ಅದು ಇಂಗ್ಲೀಷಿನ ಪುಸ್ತಕ. ಇಂಗ್ಲೀಷಿನಲ್ಲಿ ಅದು ಬಂದಿದೆ.

ಅಧ್ಯಕ್ಷರು:- ಅದನ್ನು ಏಕೆ ಇಂಗ್ಲೀಷಿನಲ್ಲಿ ಮಾಡಿಸಿದರು ಎಂದರೆ, ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕಲ್ಲವೇ? ಅಲ್ಲಿಂದ ನಮಗೆ ನೆರವು ಬೇಕಲ್ಲವೇ? ಅದಕ್ಕೋಸ್ಕರ ಕಳುಹಿಸಿದ್ದಾರೆಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್:- ನಮಗೆ ತರ್ಜುಮೆ ಮಾಡಿ ಒಂದು ಪ್ರತಿಯನ್ನು ಒದಗಿಸಬೇಕೆಂದು ಹೇಳುತ್ತೇನೆ. ದೆಹಲಿಗೆ ಕಳುಹಿಸುವುದಕ್ಕೆ ಏನು ಬೇಕಾದರೂ ಮಾಡಿಕೊಳ್ಳಲಿ. ಅಂಥದ್ದು ಮಾಡುವುದಕ್ಕೆ ನಮ್ಮದು ಏನೂ ತಕರಾರು ಇಲ್ಲ. ಆದರೆ ಕನ್ನಡವನ್ನು ಪಾತಾಳಕ್ಕೆ ಇಳಿಸುವ ಪ್ರಶ್ನೆಯೇ ಇಲ್ಲ.

ಅಧ್ಯಕ್ಷರು:- ಪಾತಾಳಕ್ಕೆ ಇಳಿಸುವುದು ಅಲ್ಲ. ಕನ್ನಡವನ್ನು ಗೌರೀಶಂಕರದೆತ್ತರಕ್ಕೆ ತೆಗೆದುಕೊಂಡು ಹೋಗತಕ್ಕದ್ದು ಇದೆ. ಅದರಿಂದ ಏನೂ ತೊಂದರೆ ಇಲ್ಲ. ಭಾಷಾಂತರ ಆಗುತ್ತಾ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದನ್ನು ಭಾಷಾಂತರ ಮಾಡಿಸಿ ಕೊಡುತ್ತೇನೆ.

4. In general, the Mini cement plants have suffered due to delay in project implementation, managerial problems and low capacity utilisation levels, rendering them sick.

5. These mini cement plants have a total installed capacity of 3,360 tonnes per day and in all employ 5924 persons. In respect of 23 number of units, where details were readily available, units have been financed terms loan to an extent of Rs.52.26 Crores by State financial institutions & Commerical banks and the principal and interest outstanding as on date from these units is of the order of Rs.8.32 crores and Rs.11.39 crores, respectively.

6. In respect of sick industrial units covered by the BIFR, the State Govt. has considered reliefs like:

i) Reduction of powercut by 50% of the normal cut applicable.

ii) Permission to pay the arrears of Sales tax & arrears of electricity dues in suitable instalments with interest at 18%

iii) Postponment of payment of instalments of Development loan availed from Govt. of Karnataka by 3 years, and

iv) Sanctioning need-based additional power to enable the units to

run at optimum capacity utilisation.

Three such sick BIFR units are:

1. M/s. Karnataka Minerals & Manufacturing Co.Ltd., Mathod, Hosadurga Tq, Chitradurga District.
2. M/s. Veda Cements, Hosadurga Tq, Chitradurga.
3. M/s. Shiva Minerals & Cement Industries, Kanchipura village, Hosadurga Tq, Chitradurga.

7. Further the following units are registered with BIFR as sick units in respect of which hearings are under progress:

1. M/s. Karnataka Cements Ltd., Chitapur, Gulbarga Dist,
2. M/s. Mic Cements Ltd., Jeevargi, Gulbarga District.
3. Sree Quality Cements Pvt.Ltd, Naganapur, Bijapur.
4. M/s. Rayhan Cements & Minerals Inds. Chitradurga.

8. Further general problems of low capacity utilisation, management deficiency, power-supply problems/interruptions, raw material problems like, non-avialability of coal/coke breeze and in general the higher overheads on account of accumulated overdues of interest and principal etc., have come to the notice of the Govt.

9. Mini Cement plants have also been representing for Sales Tax concession on the ground that keeping in view the similar problems of mini cement industries, the Andra Pradesh Govt. has also reduced Sales Tax applicable to products of mini cement plants to 50% of the normal rate of tax applicable with effect from 2nd May, 1991 for a period of 3 years.

The State Government, is examining appropriate reliefs in this regard for revival of Mini cement industries in the State.

The State Govt. would also take up with Cement Research Institute of India, New Delhi, for suitable upgradation of the design and capacity of these plants so as to make them viable.

12.10 ಪಿ.ಎಂ.

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಉತ್ತರವನ್ನು ಕೊಡುವ ಸಂದರ್ಭದಲ್ಲಿ "in the early 1980s in view of the scarcity of cement, every entrepreneur took up smaller projects" ಎನ್ನತಕ್ಕಂತಹ ಮಾತನ್ನು ತಾವು ಹೇಳಿದ್ದೀರಿ. ತಮಗೆ ಇದರ ಬಗ್ಗೆ ಮಾಹಿತಿ ಇಲ್ಲದೆ ಈ ಮಾತನ್ನು ಹೇಳುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಮುಖ್ಯವಾದಂತಹ ಉದ್ದೇಶ ಗವರ್ನ್‌ಮೆಂಟ್ ಆಫ್ ಇಂಡಿಯಾದ

ಮುಂದೆ ಏನು ಇತ್ತು ಅಂದರೆ ಗ್ರಾಮಾಂತರ ಪ್ರದೇಶದಲ್ಲಿ ಎಲ್ಲೆಲ್ಲಿ ಸ್ಮಾಲ್ ಡೆಪಾಸಿಟ್ಸ್ ಇರುತ್ತದೆಯೋ, ಸ್ಮಾಟರ್ಡ್ ಡೆಪಾಸಿಟ್ಸ್ ಏನು ಇತ್ತು, ಆ ಡೆಪಾಸಿಟ್ಸ್‌ನ್ನು ಉಪಯೋಗಿಸುಕೊಳ್ಳುವುದರ ಮುಖೇನ ರೂರಲ್ ಎಂಪ್ಲಾಯಿಮೆಂಟ್ ಕೊಡಬೇಕು ಎನ್ನುವ ದೃಷ್ಟಿಯಿಂದ ಅಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಎನ್ನತಕ್ಕಂತಹ ನಿರ್ದೇಶನವನ್ನು ಮಾಡಿ, ಇವತ್ತು ಅನೇಕರಿಗೆ ಲೈಸೆನ್ಸ್‌ಗಳನ್ನು ಕೊಟ್ಟರು. ಇದು ಪ್ರಾರಂಭವಾದದ್ದು ಸರ್ಕಾರದಿಂದಲೇ ವಿನಹ ಎಂಟರ್‌ಪ್ರಿನರ್ಸ್ ಮುಖೇನ ಅಲ್ಲ. ಅನೇಕ ತರಹವಾದಂಥ ಕನ್‌ಸೇಷನ್ಸ್ ಇದಕ್ಕೆ ಕೊಟ್ಟಿದ್ದೀರಿ ಎನ್ನತಕ್ಕಂತಹ ಮಾತನ್ನು ಕೂಡ ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಆದರೂ ಕೂಡ ಸ್ಕೇರ್‌ಸಿಟಿ ಎನ್ನತಕ್ಕಂತಹ ಒಂದು ಮಾತನ್ನು ಹೇಳಿದಾಗ ಆ ಸ್ಕೇರ್‌ಸಿಟಿ ಬಗ್ಗೆ ತಾವು ಯೋಚನೆ ಮಾಡಿದ್ದೀರಾ? ಎಕ್ಸ್‌ಪರ್ಟ್ ಹೇಳುತ್ತಿದ್ದಾರೆ ಇನ್ನು 5-6 ವರ್ಷದಲ್ಲಿ ಸ್ಕೇರ್‌ಸಿಟಿ ಗ್ಯಾಪ್ ಎಷ್ಟು, ದೊಡ್ಡದ್ದು ಆಗುತ್ತದೆ ಅಂದರೆ ಇವತ್ತು ಸಾಮಾನ್ಯ ಜನರಿಗೆ ಸಿಮೆಂಟ್ ಸಿಗದೇ ಇರತಕ್ಕಂತಹ ಪರಿಸ್ಥಿತಿ ಬರಬಹುದು ಎಂದು ಕೂಡ ಹೇಳಿದ್ದಾರೆ. ಅಂತಹ ನಿಮ್ಮ ಎಕ್ಸ್‌ಪರ್ಟ್ ಕಮಿಟಿ ರಿಪೋರ್ಟ್ ಇದ್ದಾಗಲೂ ಕೂಡ ಅನೇಕ ಕೈಗಾರಿಕೆಗಳು ಮುಚ್ಚಹೋಗಿವೆ. ಸುಮಾರು 60 ಕೋಟಿ ರೂಪಾಯಿ ಹಣ ಸರ್ಕಾರದ ಬಂಡವಾಳ ಬಿದ್ದಿರತಕ್ಕಂತಹ ಕೈಗಾರಿಕೆಗಳಲ್ಲಿ 6 ಸಾವಿರ ಜನ ನೌಕರರು ಬೀದಿ ಪಾಲಗಿರತಕ್ಕಂತಹ ಸಂದರ್ಭದಲ್ಲಿ ಎಲ್ಲಾ ಕಾರ್ಖಾನೆಗಳು ಮುಚ್ಚಹೋಗಿರತಕ್ಕಂಥವುಗಳೇ. ಅದನ್ನು ತೆಗೆಯುವುದರ ಬಗ್ಗೆ ತಾವು ಏನು ಆಶ್ವಾಸನೆ ಕೊಟ್ಟಿದ್ದೀರಿ, ಆ ಕೊಟ್ಟಿರತಕ್ಕಂತಹ ಆಶ್ವಾಸನೆ ಏನೇನೂ ಪ್ರಯೋಜನ ಆಗುವುದಿಲ್ಲ. ಸ್ಕೇರ್‌ಸಿಟಿ ಎಷ್ಟು ಇದೆ ಎನ್ನುವುದನ್ನು ನೀವು ಗಮನದಲ್ಲಿ ಇಟ್ಟುಕೊಂಡಿದ್ದೆ ಆದರೆ ನನಗೆ ಅನಿಸುತ್ತದೆ, ನೀವು ಹೊರ ರಾಜ್ಯದಲ್ಲಿ ಕೊಟ್ಟಿರತಕ್ಕಂತಹ ಕನ್‌ಸೇಷನ್ಸ್ ಏನು ಇದೆ, ಆ ಪ್ರಕಾರವಾಗಿ ನೀವೂ ಕೊಟ್ಟು, ಇವತ್ತು ಮುಚ್ಚಹೋಗಿರತಕ್ಕಂತಹ ಸಿಕ್ ಯೂನಿಟ್ಸ್ ಏನು ಇವೆ ಅವನ್ನು ರಿವೈವ್ ಮಾಡಬೇಕಾದರೆ ಸರ್ಕಾರವೇ ಮುಂದೆ ಬರಬೇಕು. ಏಕೆಂದರೆ ಈ ಪ್ರಾಜೆಕ್ಟ್‌ಗಳನ್ನು ಮೂಟ್ ಮಾಡಿದಂಥವರು ಗವರ್ನ್‌ಮೆಂಟ್ ಆಫ್ ಇಂಡಿಯಾದವರು. State Government and in consultation with Central Cement Research Institute, New Delhi. ಅವರನ್ನು ಮುಂದೆ ಇಟ್ಟುಕೊಂಡು ಇವತ್ತು ನೀವು ಅದನ್ನು ರಿವೈವ್ ಮಾಡದೆ ಇದ್ದರೆ ಈ ಕೈಗಾರಿಕೆಗಳಿಗೆ ಸಾರ್ವಜನಿಕವಾಗಿ ಬಂಡವಾಳ ಏನು ಹಾಕಿದ್ದೀರಿ ಆ 60 ಕೋಟಿ ರೂಪಾಯಿ ಹಣ ನೆಲಸಮವಾಗಿ ಹೋಗುತ್ತದೆ. ಸುಮಾರು 55 ಫ್ಯಾಕ್ಟರಿಗಳ ಪೈಕಿ ನನ್ನ ಕ್ಷೇತ್ರದಲ್ಲೇ ಎಂಟು ಇವೆ. ನೀವು ಬಂದರೆ ನಾನು ಅವನ್ನು ತೋರಿಸುತ್ತೇನೆ. ಆ ಫ್ಯಾಕ್ಟರಿಗಳಲ್ಲಿ ಯಾರೂ ಇಲ್ಲ, ಒಬ್ಬ ವಾಚ್‌ಮನ್ ಬಿಟ್ಟರೆ ಯಾರೂ ಇಲ್ಲ. ಅಲ್ಲಿ ಕೆಲಸ ಮಾಡಿದಂಥ ನೌಕರರು ಫ್ಯಾಕ್ಟರಿಯನ್ನು ಇವತ್ತು ತೆಗೆಯುತ್ತಾರೆ ನಾಳೆ ತೆಗೆಯುತ್ತಾರೆ ಎಂದು ಕುಳಿತು ನೋಡುತ್ತಿರತಕ್ಕಂತಹ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ನೀವು ಕೊಟ್ಟಿರತಕ್ಕಂಥ ಉತ್ತರದಲ್ಲಿ ನನಗಂತೂ ಸಮಾಧಾನ ಇಲ್ಲ. ಮುಖ್ಯಮಂತ್ರಿಗಳ ಪರವಾಗಿ ನೀವು ಉತ್ತರ ಕೊಡಬೇಕಾದರೆ ನಿಮಗೂ ಸಮಾಧಾನ ಇಲ್ಲ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಏಕೆಂದರೆ ಕೈಗಾರಿಕೆ ಬಗ್ಗೆ ನಿಮಗೆ ಗೊತ್ತಿರತಕ್ಕಂತಹ ವಿಷಯ ಇದು. ನಾನು ಈ ಸಂದರ್ಭದಲ್ಲಿ ತಮಗೆ ಒತ್ತಾಯಪೂರ್ವಕವಾಗಿ ಕೇಳುತ್ತಿರತಕ್ಕಂಥಾದ್ದು, ಸಿಮೆಂಟ್ ಫ್ಯಾಕ್ಟರಿಯವರು ಏನು ಇದ್ದಾರೆ ಅವರನ್ನು ಮುಖ್ಯಮಂತ್ರಿಗಳು ಕರೆದು, ಏನು ವಿಚಾರ ಇದೆ, ಹೊರರಾಜ್ಯದಲ್ಲಿ ಕೊಟ್ಟಿರತಕ್ಕಂತಹ ಕನ್‌ಸೇಷನ್ಸ್ ಏನು ಇದೆ ಅದನ್ನು ನೋಡಿ ಅದರ ಬಗ್ಗೆ ವಿಮರ್ಶೆ ಮಾಡಿ ಆದಷ್ಟು ಬೇಗ ಆಶ್ವಾಸನೆ ಕೊಡಬೇಕು. ನೀವು ಇಂತಹ ದಿವಸ ಕರೆಯುತ್ತೇವೆ ಮಾತನಾಡುತ್ತೇವೆ ಮತ್ತು ಈ ಎಲ್ಲಾ ಕಾರ್ಖಾನೆಗಳನ್ನು ಕೂಡ ತೆಗೆಯುತ್ತೇವೆ ಎಂದು ನಿರ್ದಿಷ್ಟವಾದಂತಹ, ಸ್ಪಷ್ಟವಾದಂತಹ ಉತ್ತರವನ್ನು ಕೊಡುವುದಾದರೆ ನಾನು ಖಂಡಿತವಾಗಿ ನಿಮ್ಮನ್ನು ಸ್ವಾಗತಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು

ಒಪ್ಪಿಕೊಂಡಿದ್ದೇವೆ ಇಂತಹ ಮಿನಿ ಸಿಮೆಂಟ್ ಪ್ಲಾಂಟ್ಸ್ ಬಹಳಷ್ಟು ಲಾಸ್‌ನಲ್ಲಿ ಇವೆ. ಮತ್ತು ಅದಕ್ಕೆ ಕಾರಣಗಳನ್ನು ಕೂಡ ಹೇಳಿದ್ದೇನೆ. ಅದಕ್ಕೆ ಎಲೆಕ್ಟ್ರಿಸಿಟಿ ಇರಬಹುದು, ಅಥವಾ ರಾಮೇಟಿರಿಯಲ್ಸ್ ಕೆಲವು ಕಡೆ ಇರಬಹುದು. ಏಕೆಂದರೆ ಹಾಕುವಾಗ ಒಂದು ಕಡೆ ಚೆನ್ನಾಗಿ ಇರುತ್ತದೆ, ರಾಮೇಟಿರಿಯಲ್ಸ್ ಸಿಗುತ್ತದೆ ಎಂದು ಹಾಕುತ್ತಾರೆ, ನಂತರ ಅಲ್ಲಿ ರಾಮೆಟೀರಿಯಲ್ಸ್ ಸಿಕ್ಕುವುದಿಲ್ಲ. ಅಂದರೆ ಬೇಕಾದಷ್ಟು ಕ್ವಾಂಟ್ಟಿಟಿ ಸಿಗುವುದೆ ಇಲ್ಲ. ನಮ್ಮ ಗುಲ್ಬರ್ಗದಲ್ಲಿ ವಿಪರೀತ ಮಿನಿಸಿಮೆಂಟ್ ಪ್ಲಾಂಟ್ಸ್ ಇವೆ. ಚಿತ್ರದುರ್ಗದಲ್ಲಿ 3-4 ಇದ್ದರೆ, ಗುಲ್ಬರ್ಗದಲ್ಲಿ ಸುತ್ತ ಮುತ್ತೆಲ್ಲಾ ಸಿಮೆಂಟ್ ಪ್ಲಾಂಟ್ಸ್ ಹಾಕಿದ್ದಾರೆ. ಆದರೆ ಒಂದು ಕೂಡ ವಯಬಲ್ ಮತ್ತು ಎಕಾನಾಮಿಕಲಿ ಇವತ್ತು ಫೀಸಿಬಲ್ ಇಲ್ಲ ಎಂದು ಬಹಳಷ್ಟು ಕ್ಲೋಸ್ ಮಾಡಿದ್ದಾರೆ.

ಆಂಧ್ರದಲ್ಲಿ ಕೆಲವು ಕನ್‌ಸೇಷನ್ಸ್ ಕೊಟ್ಟು ಮಿನಿ ಸಿಮೆಂಟ್ ಪ್ಲಾಂಟ್ಸ್‌ನ್ನು ರಿವೈವ್ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳಿದಿರಿ. ಅದನ್ನು ಅವರು ಯಾವ ರೀತಿಯಲ್ಲಿ ಮಾಡಿದ್ದಾರೆ ಎಂದು ಹೇಳಿ, ಬೇಕಾದರೆ ಆ ಪ್ರಾಜೆಕ್ಟ್ ರಿಪೋರ್ಟ್‌ನ್ನು ತರಿಸಿಕೊಳ್ಳುತ್ತೇನೆ. ಯಾವ ರೀತಿಯ ಸಲಹೆಗಳು ಎಂದು ತಾವು ಬರೆದು ಕೊಟ್ಟರೆ, ಆ ಸಂಬಂಧವಾಗಿ ನಾನೂ ಸಹ ಇಲಾಖಾವತಿಯಿಂದ ತರಿಸಿಕೊಂಡು ಅದನ್ನು ರೀಎಗ್ಜಾಮಿನ್ ಮಾಡುತ್ತೇನೆ. ಇವುಗಳನ್ನು ಯಾವ ರೀತಿಯಲ್ಲಿ ವೈಯಬಲ್ ಮಾಡಬೇಕು ಮತ್ತು ಆ ಜನರಿಗೆ ಯಾವ ರೀತಿ ಎಂಪ್ಲಾಯ್‌ಮೆಂಟ್ ಕೊಡಬೇಕೆನ್ನುವ ದೃಷ್ಟಿಯಿಂದಲೂ ಮತ್ತು ಅದೆ ರೀತಿಯಾಗಿ ಸಿಮೆಂಟ್ ಸ್ಕೇರ್‌ಸಿಟಿ ಕೂಡ ಹೋಗಲಾಡಿಸುವುದಕ್ಕೆ ಯೋಜನೆ ಮಾಡತಕ್ಕಂಥ ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:- ಕೊನೆಯದಾಗಿ ಮಾನ್ಯ ಅಧ್ಯಕ್ಷರೇ, ಈಗಾಗಲೇ ಕೆಲವು ಫ್ಯಾಕ್ಟರಿಗಳು ತೆಗೆದು ಇನ್ನು ಎನು ಕೆಲವೇ ದಿವಸಗಳಲ್ಲಿ ಅವು ಮುಚ್ಚತಕ್ಕಂಥ ಪರಿಸ್ಥಿತಿಯಲ್ಲಿ ಇರುವಾಗ ಸರ್ಕಾರದಿಂದ ಒಂದು ಆದೇಶ ಹೋಗಿದೆ. ಅದೇನೆಂದರೆ price concession to the small scale industries, price preference or purchase pereference ಎನ್ನತಕ್ಕಂಥ ಆದೇಶವನ್ನು ನೀವು ಹೊರಡಿಸಿದ್ದೀರಿ ಸರ್ಕಾರದಿಂದ. ಈ ಪ್ರಕಾರವಾಗಿ ನೀವು ಸ್ಥಳೀಯವಾಗಿರತಕ್ಕಂಥ ಜಿಲ್ಲಾಪರಿಷತ್ತುಗಳಿಗೆ ಇಲ್ಲ, ಸರ್ಕಾರಿ ಕಛೇರಿಗಳಿಗೆ ಆದೇಶವನ್ನು ಕೊಟ್ಟು ಕೊನೆಯ ಪಕ್ಷ 30 ಪರ್ಸೆಂಟ್ ಅಷ್ಟಾದರೂ ಪರ್ಚೇಜ್ ಮಾಡುವಂತಹ ಸ್ಪಷ್ಟವಾದ ಆದೇಶವನ್ನು ಕೊಟ್ಟರೆ ನನಗನಿಸುತ್ತದೆ ಈ ಸಿಕ್‌ನೆಸ್ ಏನಿದೆ ಇದು 50 ಪರ್ಸೆಂಟ್ ರೆಡ್ಯೂಸ್ ಆಗುವುದಕ್ಕೆ ಸಾಧ್ಯ ಇದೆ. ಇವತ್ತು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಎಸ್.ಪಿ.ಡಿ.ರೇಟ್ ಕಾಂಟ್ರಾಕ್ಟ್‌ನಲ್ಲಿ ರಿಜಿಸ್ಟರ್ ಆಗಿರುತ್ತಾರೆ. ಯಾರೂ ಕೂಡ ಆ ರೀತಿ ಆರ್ಡರ್ ಕೊಡುವುದಕ್ಕೆ ಮುಂದೆ ಬರುತ್ತಿಲ್ಲ. ಈ ಸಂದರ್ಭದಲ್ಲಿ ನೀವು 30-25 ಪರ್ಸೆಂಟ್ ಕೊಡುವುದರಲ್ಲಿ ನಿಗಧಿತವಾಗಿ ಎಷ್ಟು ಎನ್ನತಕ್ಕಂಥ ಆದೇಶ ಕೊಡಲಿಕ್ಕೆ ತಪ್ಪೇನು ಇದೆ. ದಯಮಾಡಿ ಇದರ ಬಗ್ಗೆ ಸ್ಪಷ್ಟವಾಗಿ ಉತ್ತರ ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ ಅವರು ಆಂಧ್ರದವರು ಫ್ಯಾಕೇಜ್ ಡೀಲ್ ಮಾಡಿ ರಿವೈವಲ್ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ಅವರು ಹೇಳಿದ್ದಾರೆ ಅದನ್ನು ನಾನೂ ಕೂಡ ತರಿಸುತ್ತೇನೆ. ಮತ್ತು ಈಗ ನಾವು ನೇರವಾಗಿ ಮಿನಿ ಸಿಮೆಂಟ್ ಪ್ಲಾಂಟ್‌ಗಳಲ್ಲಿ ಪ್ರೊಡ್ಯೂಸ್ ಆಗತಕ್ಕಂಥ ಸಿಮೆಂಟ್‌ನ್ನು ತೆಗೆದುಕೊಳ್ಳಿ ಎಂದು ಹೇಳಿದರೆ ಅಲ್ಲಿ ಡೈರೆಕ್ಷನ್ ಕೊಟ್ಟರೆ ಅವರೂ ಕೂಡ ಕ್ವಾಲಿಟಿ ನೋಡುತ್ತಾರೆ. ಬ್ರಡ್ಜ್ ದೊಡ್ಡದೊಡ್ಡ ಬಿಲ್ಡಿಂಗ್ಸ್ ಇವೆಲ್ಲಾ ಕಟ್ಟಿಸುವಾಗ ಯಾವ ಸಿಮೆಂಟ್ ತೆಗೆದುಕೊಳ್ಳಬೇಕು ಯಾವ ಸಿಮೆಂಟ್ ತೆಗೆದುಕೊಳ್ಳಬಾರದು ಎನ್ನುವುದನ್ನು ಪರಿಶೀಲನೆ ಮಾಡುತ್ತಾರೆ. ಏಕೆಂದರೆ ನೇರವಾಗಿ ಸೇಲ್ಸ್ ಟ್ಯಾಕ್ಸ್ ಕನ್‌ಸೇಷನ್ಸ್ ಕೊಡುತ್ತೇವೆ ಎಲೆಕ್ಟ್ರಿಸಿಟಿ ಕನ್‌ಸೇಷನ್ಸ್ ಕೊಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ನಾನು ಸಮಗ್ರವಾಗಿ ಇದರ ಬಗ್ಗೆ ಒಂದು ಚಿಂತನೆ ಮಾಡಿ

ಇವುಗಳನ್ನು ಯಾವ ರೀತಿಯಲ್ಲಿ ರಿವೈವಲ್ ಮಾಡಬೇಕೋ ಆ ರೀತಿಯಲ್ಲಿ ಕ್ರಮ ತೆಗೆದುಕೊಳ್ಳತಕ್ಕಂತಹ ಅವಶ್ಯಕತೆ ಇದೆ ಎಂದು ನಾನು ಈಗಾಗಲೇ ತಮಗೆ ಹೇಳಿದ್ದೇನೆ ಆ ರೀತಿಯಲ್ಲಿ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ:– ಮಾನ್ಯ ಅಧ್ಯಕ್ಷರೇ ಇದು ಪ್ರಮುಖವಾದ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಇಲ್ಲ. ಮುಖ್ಯಮಂತ್ರಿಗಳು ಬಂದಾಗ ಇದನ್ನು ತೆಗೆದುಕೊಳ್ಳತಕ್ಕಂಥಾದ್ದು ಸೂಕ್ತ ವೆಂದು ನನಗನಿಸುತ್ತದೆ.

ಅಧ್ಯಕ್ಷರು:– ಹೇಗಾಗುತ್ತದೆಯೋ ನೋಡೋಣ. ಈಗ ನಿಯಮ 334 ಅನ್ನು ತೆಗೆದುಕೊಳ್ಳೋಣ.

ಶ್ರೀ ಸಿ ಬೈರೇಗೌಡ:– ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ಬಂದರು ಈಗ ತೆಗೆದುಕೊಳ್ಳುವುದು ಸೂಕ್ತ ವೆಂದು ನನಗೆ ಅನಿಸುತ್ತದೆ. ಗಮನ ಸೆಳೆಯುತ್ತೇನೆ.

ಅಧ್ಯಕ್ಷರು:– ಬೇಡ, ನಾನು ಒಂದು ಗಮನ ಸೆಳೆದು ಆಮೇಲೆ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ಈ ತರಹದ ನೇಚರ್ ಇರುವ ಸಬ್ಜಕ್ಟ್ ಮುಂದಕ್ಕೆ ಹೋಗುತ್ತಿರುತ್ತದೆ.

ಅಧ್ಯಕ್ಷರು:– ಇದಕ್ಕೆ ಸಾಕಷ್ಟು ಪ್ರಿಯಾರಿಟಿ ಕೊಟ್ಟು ಅದನ್ನು ಸೇರಿಸಿದ್ದೇನೆ. ಆದ್ದರಿಂದ ಮುಂದಕ್ಕೆ ಹೋಗುವ ಪ್ರಶ್ನೆ ಇಲ್ಲ. ಈ ಸದನದ ಸಭಾನಾಯಕರಾದ ಶ್ರೀ ಎಂ. ವೀರಪ್ಪಮೊಯಿಲಿಯವರ 54ನೇ ಜನ್ಮದಿನ. ಈ ಸದನದ ಎಲ್ಲಾ ಸದಸ್ಯರ ಪರವಾಗಿ ಹಾಗೂ ನನ್ನ ಪರವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಹೃತ್ಪೂರ್ವಕವಾದ ಶುಭಾಶಯಗಳನ್ನು ಕೋರುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಅವರಿಂದ ನಮಗೇನೂ ಇಲ್ಲವಲ್ಲ.

ಅಧ್ಯಕ್ಷರು:– ಅವರಿಂದ ನಿಮಗೆ ಧನ್ಯವಾದಗಳು ಸಿಗುತ್ತದೆ ಅಷ್ಟೇ.

3) ಸಾರಾಯಿಯನ್ನು ಪ್ಲಾಸ್ಟಿಕ್ ಚೀಲದಲ್ಲಿ ಮಾರುವುದರಿಂದ ಅಬಕಾರಿ ಆದಾಯದಲ್ಲಿ ಸೋರಿಕೆ.

ಶ್ರೀ ಸಿ. ಬೈರೇಗೌಡ:– ಸಾರಾಯಿ ಮಾರಾಟದಿಂದ ಆಗುತ್ತಿರತಕ್ಕಂಥ ಸೋರಿಕೆ, ರಾಜ್ಯಕ್ಕೆ ಬರಬೇಕಾಗಿರತಕ್ಕಂತ ಹಣದ ಸೋರಿಕೆ ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ಅಧ್ಯಕ್ಷರೇ ಈ ಹೇಳಿಕೆಯನ್ನು ಮಂಡಿಸಲಿಕ್ಕೆ ತಮ್ಮ ಅಪ್ಪಣೆಯನ್ನು ಕೇಳುತ್ತಿದ್ದೇನೆ.

ಮಾನ್ಯ ಶಾಸಕರುಗಳಾದ ಸರ್ವಶ್ರೀ ಪಿ.ಜಿ.ಆರ್. ಸಿಂಧ್ಯಾ, ಹೆಚ್. ಏಕಾಂತಯ್ಯ ಆರ್.ವಿ. ದೇಶಪಾಂಡೆ, ಸಿ. ಬೈರೇಗೌಡ ಮತ್ತು ವೈ.ಕೆ. ರಾಮಯ್ಯ ಇವರುಗಳು ತೆರಿಗೆ ರಹಿತ ಸಾರಾಯಿಯನ್ನು ಮಾರುವುದರಿಂದ ಮತ್ತು ಸಾರಾಯಿಯನ್ನು ಪ್ಲಾಸ್ಟಿಕ್ ಚೀಲದಲ್ಲಿ ಮಾರಾಟ ಮಾಡುವುದರಿಂದ ಅಬಕಾರಿ ಆದಾಯ ಸೋರಿ ಹೋಗುತ್ತಿರುವ ಬಗ್ಗೆ ಮತ್ತು ಈ ರೀತಿ ಸೋರಿ ಹೋಗುವ ಆದಾಯವನ್ನು ತಡೆಗಟ್ಟಿದಲ್ಲಿ ಅಬಕಾರಿ ಆದಾಯ ರೂ. 1000 ಕೋಟಿಗಳಿಗೆ ಹೆಚ್ಚಿಸಬಹುದು ಎಂಬ ಬಗ್ಗೆ ಗಮನ ಸೆಳೆಯುವ ಸೂಚನೆಯನ್ನು ಮಂಡಿಸಿರುತ್ತಾರೆ.

ಈ ವರ್ಷ ಅಂದರೆ 1992–93ನೇ ಸಾಲಿನಲ್ಲಿ ಸರ್ಕಾರವು ಎಲ್ಲಾ ಮೂಲಗಳಿಂದ ಅಬಕಾರಿ ಆದಾಯವನ್ನು ರೂ.573 ಕೋಟಿಗಳಷ್ಟು ನಿರೀಕ್ಷಿಸಿದೆ. ಸೋರಿ ಹೋಗುತ್ತಿದೆ ಎಂದು ಹೇಳಲಾದ ಆದಾಯವನ್ನು ತಡೆಹಿಡಿದಾಗ್ಯೂ ಅಬಕಾರಿ ಆದಾಯವು ಈ ವರ್ಷ ರೂ. 1000 ಕೋಟಿಗಳಿಗೆ